ದಿನಾಂಕಃ 06.11.2023. ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು

ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಬಿ.ಡಿ. ವಕೀಲರಿಂದಃ

ನಾನು 8 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನಾನು ಅಪಘಾತಕ್ಕಿಂತ ಮುಂಚೆ ಹೇಗೆ ವ್ಯವಸಾಯ ಮಾಡುತ್ತಿದ್ದೆ ಅದೇ ರೀತಿಯಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ನಿಜ. ನಮ್ಮ ವ್ಯವಸಾಯದ ವರಮಾನದ ಮೇಲೆ ಜೀವನ ನಡೆಯುತ್ತಿದೆ ಎಂದರೆ ನಿಜ. ನಮಗೆ ಇಬ್ಬರು ಗಂಡು ಮಕ್ಕಳು ಅದರಲ್ಲಿ 2 ನೇ ಮಗ ವಿನೋದ್ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಮೃತ ನನ್ನ ಮಗ 10 ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದನು. ನನ್ನ ಅಥವಾ ನನ್ನ ಮಗನ ಶಾಲಾ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ಹಿರಿಯ ಮಗ 3 ವರ್ಷಗಳಿಂದ ಫೋಟೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದಾನೆ. ನನ್ನ ಮಗನ ವರಮಾನದಲ್ಲಿ ಈಗ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂದರೆ ನಿಜ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತವಾದ ನಂತರ ಇವತ್ತಿನ ವರೆಗೆ ಅಪಘಾತ ಸ್ಥಳ ನೋಡಿರುವುದಿಲ್ಲ. ಸದರಿ ಅಪಘಾತ ಸ್ಥಳದ ಬಗ್ಗೆ ನಾನು ಯಾವುದೇ ಹೇಳಿಕೆ ಅಥವಾ ದಾಖಲೆಯನ್ನು ಪೋಲೀಸರಿಗೆ ನೀಡಿರುವುದಿಲ್ಲ.

ಅಪಘಾತ ಸಮಯದಲ್ಲಿ ನನ್ನ ಮಗನ ಬಳಿ ಚಾಲನಾ ಪತ್ರ, ಆರ್.ಸಿ ಮತ್ತು ವಿಮೆ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ ಆದರೆ ಕೇವಲ ಚಾಲನಾ ಪತ್ರ ಮಾತ್ರ ಹಾಜರುಪಡಿಸಿರುತ್ತೇನೆ. ಸದರಿ ಮೋಟರ್ ಸೈಕಲ್ ನನ್ನ ದೊಡ್ಡ ಮಗನಾದ ಮದನ್ ವೈ.ಜೆ. ರವರ ಹೆಸರಿನಲ್ಲಿತ್ತು. ಹಾಗೆ ತೋರಿಸಲು ವಾಹನಕ್ಕೆ ಸಂಬಂಧಪಟ್ಟ ದಾಖಲೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ನಿಜ. ಅಪಘಾತವಾದ ರಸ್ತೆ ದ್ವಿಮುಖ ರಸ್ತೆಯಾಗಿರುತ್ತದೆ. ಸದರಿ ರಸ್ತೆಮೇಲೆ ನಾನು ಹಲವಾರು ಬಾರಿ ಪ್ರಯಾಣಿಸಿರುತೇನೆ ಮತ್ತು ಆ ರಸ್ತೆ ನನಗೆ ಚಿರಪರಿಸಿತವಾಗಿರುತ್ತದೆ.

ರಸೆತಯ ಮಧ್ಯಭಾಗದಲ್ಲಿ ಯಾವುದೇ ವಿಭಜಕ ಇರುವುದಿಲ್ಲ. ಅಪಘಾತವಾದ ರಸ್ತೆ ಜನನಿಬಿಡ ರಸ್ತೆಯಾಗಿದ್ದು ಅದರಲ್ಲಿ ಸಾಕಷ್ಟು ವಾಹನಗಳು ಚಲಿಸುತ್ತವೆ ಎಂದರೆ ಸರಿಯಲ್ಲ. ನಾನು ಅಪಘಾತಮಾಡಿದ ಕಾರನ್ನು ಇವತ್ತಿನ ವರೆಗೆ ಯಾವತ್ತೂ ಕೂಡ ನೋಡಿರುವುದಿಲ್ಲ. ಸದರಿ ಕಾರಿನ ಮಾಲೀಕರು ಜೀವಂತವಿರುತ್ತಾರೆ ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ. ಅಪಘಾತ ಮಾಡಿದ ಕಾರ್ ಅಪಘಾತದ ದಿನ ಯಾರ ಸ್ವಾಧೀನದಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಈ ಕೇಸಿನ 2 ನೇ ಪ್ರತಿವಾದಿ ರಮೇಶ್ ಮತ್ತು ತೇಜಸ್ ಬಿ.ಆರ್. ಯಾರು ಎಂದು ನನಗೆ ಗೊತ್ತಿಲ್ಲ. ಅರ್ಜಿ ಹಾಕುವ ಸಮಯದಲ್ಲಿ ನಾನು ಪೋಲೀಸ್ ಠಾಣೆಯಿಂದ ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ನೋಡಿ ಪರಿಶೀಲಿಸಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಪೋಲೀಸರು ಹಾಜರುಪಡಿಸಿದ ಎಲ್ಲಾ ದಾಖಲೆಗಳು ಕನ್ನಡದಲ್ಲಿರುತ್ತವೆ ಎಂದರೆ ನಿಜ. ಪೋಲೀಸ್ ದಾಖಲೆಗಳ ಪ್ರಕಾರ ಅಪಘಾತವಾದಾಗ 2 ನೇ ಎದುರುದಾರರು ರಮೇಶ್ ಮತ್ತು ಅವರ ಹೆಂಡತಿ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಸಮಯದಲ್ಲಿ ಈಗ ತೋರಿಸಲ್ಪಟ್ಟ 2 ನೇ ಎದುರುದಾರರ ಮಗ ತೇಜಸ್ ಬಿ.ಆರ್. ಅಪ್ರಾಪ್ತನಾಗಿದ್ದನು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.9 ಮತ್ತು 10 ಕಲಂ 133 ರ ಅಡಿಯಲ್ಲಿ ವಾಹನವನ್ನು ಬಿಡಿಸಿಕೊಂಡ ಶೇಕ್ ಮೆಹಬೂಬ್ ಪಾಷ ಬಿನ್ ನಬಿಸಾಬ್ ವಾಹನದ ಮಾಲೀಕರಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿರುವ 2 ನೇ ಎದುರುದಾರ ರಮೇಶ್ ಮತ್ತು ಅವರ ಹೆಂಡತಿ ಅಪಘಾತಕ್ಕಿಂತ 2-3 ವರ್ಷಗಳ ಮಂಚೆ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯ ನನಗೆ ಗೊತ್ತಿದ್ದರೂ ಕೂಡ ನಾನು 2 ನೇ ಎದುರುದಾರರ ಮಗನಾದ ತೇಜಸ್ ಬಿ.ಆರ್. ಅಪ್ರಾಪ್ತನ ಮೇಲೆ ಸುಳ್ಳು ಅರ್ಜಿಯನ್ನು ಸಲ್ಲಿಸಿ ಅವರನ್ನು ಕೊಟ್ಟಿಯಾಗಿ ಪಾರ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ನ್ಯಾಯಾಲಯದ ಮುಂದೆ ಸಲ್ಲಿಸಿರುವ ಅರ್ಜಿ ಮಾನ್ಯವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿ ವಿಮಾ

ಕಂಪನಿಯವರು ನಮಗೆ ಪರಿಹಾರ ಕೊಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಮಗನು ಚಲಾಯಿಸುತ್ತಿರುವ ಮೋಟರ್ ಸೈಕಲ್ ನಿಂದ ಆತನ ತಪ್ಪಿ ನಿಂದ ಆಗಿರುತ್ತದೆ ಆದರೆ ಆತನ ಬಳಿ ಸೂಕ್ತವಾದ ಚಾಲನಾ ಪತ್ರ ಮತ್ತು ವಿಮೆ ಇಲ್ಲದ ಕಾರಣ ಪೋಲೀಸರೊಂದಿಗೆ ಶಾಮೀಲಾಗಿ ಕಾರ್ ಚಾಲಕನ ಮೇಲೆ ಸುಳ್ಳು ಕೇಸ್ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ನನ್ನ ಮಗನ ತಪ್ಪಿ ನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ಅಪಘಾತ 11 ಗಂಟೆಗೆ ಆಗಿದ್ದು ನಮಗೆ ವಿಷಯ 11.45 ಗಂಟೆಗೆ ತಿಳಿದಿರುತ್ತದೆ. ನಾವು ವಿಷಯ ತಿಳಿದ ನಂತರ ಮಣಿಪಾಲ್ ಆಸ್ಪತ್ರೆಗೆ ಹೋಗಿರುತ್ತೇವೆ. ಆಸ್ಪತ್ರೆಗೆ ಹೋದಾಗ ನನ್ನ ಮಗನಿಗೆ ವೈದ್ಯರು ಚಿಕಿತ್ಸೆ ಕೊಡುತ್ತಿದ್ದರು ಮತ್ತು ಅದೇ ದಿನ ಮದ್ಯಾಹ್ನ 2 ಗಂಟೆಗೆ ಮರಣ ಹೊಂದಿರುತ್ತಾನೆ. ತದಾದ ನಂತರ ನಾನು ವಿಚಾರಿಸಿದಾಗ ಅಲ್ಲಿದ್ದ ಸಾರ್ವಜನಿಕರು ಅಪಘಾತದ ವಿಷಯವನ್ನು ನಮಗೆ ತಿಳಿಸಿರುತ್ತಾರೆ. ಸದರಿ ಸಾರ್ವಜನಿಕರು ನಮಗೆ ಕಾರಿನ ನಂಬರ್ ಅಥವಾ ಯಾವ ವಾಹನ ಅಪಘಾತ ಮಾಡಿರುತ್ತದೆ ಎಂದು ಮಾಹಿತಿ ನೀಡಿರುವುದಿಲ್ಲ. ಆಸ್ಪತ್ರಯಲ್ಲಿ ನನ್ನ ಮಗನಿಗೆ ಯಾವ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ವೈದ್ಯರಿಗೆ ಅಪಘಾತ ಹೇಗೆ ಆಗಿರುತ್ತದೆ ಮತ್ತು ಯಾವ ವಾಹನದಿಂದ ಆಗಿರುತ್ತದೆ ಎಂದು ಮಾಹಿತಿ ಕೊಟ್ಟಿರುವುದಿಲ್ಲ. ಆಸ್ಪತ್ರೆಯವರು ನೀಡಿದ ಪೋಲೀಸ್ ಇಂಟಿಮೇಷನ್, ಎಂ.ಎಲ್.ಸಿ ದಾಖಲೆ ಅಥವಾ Accident register extract ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. ನಾನು ಹಾಜರುಪಡಿಸಿದ ವೈದ್ಯಕೀಯ ದಾಖಲೆಗಳಲ್ಲಿ ನನ್ನಮಗ ಚಲಾಯಿಸುತ್ತಿರುವ ಮೋಟರ್ ಸೈಕಲ್ ನಂಬರ್ ಅಥವಾ ಕಾರಿನ ನಂಬರ್ ನಮೂದಾಗಿರುವುದಿಲ್ಲ ಎಂದರೆ ನಿಜ. ಅಪಘಾತ ನನ್ನಮಗನೇ ಮಾಡಿಕೊಂಡಿದ್ದು ಮತ್ತು ಅವನಿಗೆ ಕೇವಲ ಸಣ್ಣ ಪುಟ್ಟ ಗಾಯಗಳಾಗಿತ್ತು ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನ ಮಗನನ್ನು ಕೇವಲ ಮಣಿಪಾಲ್ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ

ಕೊಡಿಸಿದ್ದು ಮತ್ತು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುವುದಿಲ್ಲ. ನನ್ನ ಮಗನ ಆಸ್ಪತ್ರೆ ಮತ್ತು ಶವ ಸಂಸ್ಕಾರಕ್ಕಾಗಿ ರೂ.2 ಲಕ್ಷ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನು ಮರಣ ಹೊಂದಿದಾಗ ಆತನಿಗೆ 22 ವರ್ಷವಾಗಿತ್ತು ಎಂದು ತೋರಿಸಲು ಯಾವುದೇ ಶೈಕ್ಷಣಿಕ ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ಅದೇ ರೀತಿ ನನ್ನ ಮಗನು ಬಾರ್. & ರೆಸ್ಟೋರೆಂಟ್ ನಲ್ಲಿ ಕೆಲಸ ಮಾಡಿ ಪ್ರತೀ ತಿಂಗಳ ರೂ.20,000/- ಆದಾಯ ಹೊಂದಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ಮಗನು ಕೆ.ಆರ್. ಪುರಂ ನಲ್ಲಿ ಕೆಲಸ ಮಾಡುತ್ತಿದ್ದು ಆದರೆ ಯಾವ ಬಾರ್. & ರೆಸ್ಟೋರೆಂಟ್ ಮತ್ತು ಅದರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಬಾರ್. & ರೆಸ್ಟೋರೆಂಟ್ ರವರು ನನ್ನ ಮಗನಿಗೆ ಯಾವ ರೀತಿ ಸಂಬಳ ಕೊಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಎಲ್ಲಾ ರೂ.20,000/- ಸಂಬಳವನ್ನು ನಮಗೆ ನಗದು ರೂಪದಲ್ಲಿ ತಂದು ಕೊಡುತ್ತಿದ್ದನು. ಸದರಿ ಅಪಘಾತ ಕೇವಲ ನನ್ನ ಮಗನ ತಪ್ಪಿ ನಿಂದ ಆಗಿದ್ದು ಕಾರ್ ಚಾಲಕನ ತಪ್ಪಿ ನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಮಗನಿಗೆ ಮರಣ ಹೊಂದುವಷ್ಟು ತೀರ್ವ ಸ್ವರೂಪದ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ಅವನಿಗೆ ಪ್ರತೀ ತಿಂಗಳ ರೂ.20,000/- ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನನ್ನ ಮಗನಿಗೆ 40 ವರ್ಷವಾಗಿತ್ತು ಎಂದರೆ ಸರಿಯಲ್ಲ ಆದರೆ 22 ವರ್ಷವಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ನಾವು ಯಾವತ್ತೂ ಕೂಡ ನಮ್ಮ ಮಗನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಮತ್ತು ಅವನ ಮರಣ ಕಾರಣದಿಂದ ನಮಗೆ ಯಾವುದೇ ಆರ್ಥಿಕ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪೋಲೀಸರು ಹಾಗೂ ವಾಹನ ಬಿಡಿಸಿಕೊಂಡ ಶೇಕ್ ಮೆಹೂಬ್ ಪಾಶ ಶಾಮೀಲಾಗಿ ಪರಿಹಾರ ಸಿಗಲಿ ಎಂದು ಸುಳ್ಳು

ಕೇಸನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಎಲ್ಲಾ ದಾಖಲೆ ಮತ್ತು ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. 1 ಎದುರುದಾರ ವಿಮಾ ಕಂಪನಿಯವರು ನಮಗೆ ಪರಿಹಾರ ಕೊಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು